# ದ್ವಿತೀಯ ಭಾಷೆಯ ರೂಪದಲ್ಲಿ ಕನ್ನಡ

# 9 ಮತ್ತು 10ನೇ ತರಗತಿ

ಭಾರತ ಬಹುಭಾಷೆಯ ದೇಶ. ಬಹಳಷ್ಟು ಕಡೆಗಳಲ್ಲಿ ಪ್ರಾದೇಶಕ ಭಾಷೆಗಳೂ ನೆಲೆಸಿವೆ. ಭಾಷೆ ಹಾಗೂ ಸಂಸ್ಕೃತಿಗಳು ಭಿನ್ನವಾಗಿದ್ದರೂ ಭಾರತೀಯ ಪರಂಪರೆ ಒಂದು ಮತ್ತೊಂದಕ್ಕೆ ಸೇತುವೆಯಾಗಿದೆ. ಇದೇ ಕಾರಣದಿಂದ ಮಾತೃಭಾಷೆಯನ್ನು ಓದುವ ವಿದ್ಯಾರ್ಥಿ ಭಿನ್ನವಾದ ದ್ವಿತೀಯ ಭಾಷೆಯನ್ನು ಕನ್ನಡವಾಗಿ ಆಯ್ಕೆ ಮಾಡಿಕೊಂಡಾಗ ಅವನಲ್ಲಿ ಅಭಿವ್ಯಕ್ತಿಯು ದೃಢವಾದ ಆಧಾರ ಭಾಷೆಯ ರೂಪದಲ್ಲಿ ಮೊದಲೇ ಅವನಲ್ಲಿ ಅಡಕವಾಗಿರುತ್ತದೆ. ಇದೇ ಕಾರಣದಿಂದ 6ನೇ ತರಗತಿಯಿಂದ 8ನೇ ತರಗತಿಯವರಗೆ ಕಲಿಯುವ ಕನ್ನಡ ಭಾಷೆಯನ್ನು ಬೇಗನೆ ಗ್ರಹಿಸಿಕೊಳ್ಳುತ್ತಾನೆ. 8ನೇ ತರಗತಿಯ ತನಕ ಕನ್ನಡ ಭಾಷೆಯಲ್ಲಿ ಕೇಳುವ, ಓದುವ, ಬರೆಯುವ ಕೌಶಲ್ಯವನ್ನು ರೂಢಿಸಿಕೊಂಡಿರುತ್ತಾನೆ. ಕನ್ನಡ ಭಾಷೆಯ ಬಾಲ ಪತ್ರಿಕೆಗಳು ಮತ್ತು ಚುಟುಕು ರಚನೆಗಳನ್ನು ಓದಲು ಬಂದಿರುತ್ತದೆ. ಅದಕ್ಕಾಗಿ ಅವನು 9ನೇ ಮತ್ತು 10ನೇ ತರಗತಿಯಲ್ಲಿ ಕನ್ನಡ ಓದುವಾಗ ಕನ್ನಡ ಭಾಷೆಯ ಮಾಧ್ಯಮದಿಂದ ಕರ್ನಾಟಕದ ಬಗ್ಗೆ, ಕನ್ನಡ ಭಾಷೆಯ ಹಿರಿಮೆಯ ಮಹತ್ವವನ್ನು ಅರಿಯುವ ಪ್ರಯತ್ನದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ.

**ಶಿಕ್ಷಣದಲ್ಲಿ ಭಾಷೆಯ ಉದ್ದೇಶಗಳು**

- ದೈನಿಕ ಜೀವನದಲ್ಲಿ ಕನ್ನಡ ಭಾಷೆಯನ್ನು ಅರಿಯುವ, ಮಾತನಾಡುವ ಮತ್ತು ಜೊತೆ ಜೊತೆಗೆ ಬರೆಯುವ ಕ್ಷಮತೆಯನ್ನು ಹೆಚ್ಚಿಸುವುದು.
- ಕನ್ನಡ ಭಾಷೆಯ ಬಾಲ ಸಾಹಿತ್ಯ, ದಿನ ಪತ್ರಿಕೆಗಳನ್ನು ಓದಿ ತಿಳಿದುಕೊಳ್ಳುವುದು ಮತ್ತು ಅದರಲ್ಲಿ ಸಂತೋಷವನ್ನು ಕಾಣುವ ಕ್ಷಮತೆಯನ್ನು ಹೆಚ್ಚಿಸುವುದು.
- ಔಪಚಾರಿಕ ವಿಷಯ ಮತ್ತು ಸಂವಾದದ ಮಾತುಕತೆಗಳಲ್ಲಿ ಭಾಗವಹಿಸುವ ಕ್ಷಮತೆಯನ್ನು ಹೆಚ್ಚಿಸುವುದು.
- ಕನ್ನಡದ ಮುಖಾಂತರ ತನ್ನ ಅನುಭವವನ್ನು ಬರೆದು ಸಹಜ ರೀತಿಯಲ್ಲಿ ಅಭಿವ್ಯಕ್ತಿಪಡಿಸುವ ಕ್ಷಮತೆಯನ್ನು ಹೆಚ್ಚಿಸುವುದು.
- ವಿದ್ಯುನ್ಮಾನ ಮಾಧ್ಯಮವಾದ ( ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್) ಕನ್ನಡದ ವಿಭಿನ್ನ ರೂಪಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು.
- ತರಗತಿಯಲ್ಲಿ ಬಹುಭಾಷಾ, ಬಹು ಸಂಸ್ಕೃತಿಯ ಸಂದರ್ಭದಲ್ಲಿ ಸಕಾರಾತ್ಮಕವಾದ ಸಂವೇದನಾಶೀಲತೆಯ ಯೋಚನಾಶಕ್ತಿಯನ್ನು ಬೆಳೆಸುವುದು.
- ತಮ್ಮ ಮಾತೃಭಾಷೆ ಮತ್ತು ಇತರ ಭಾಷೆಗಳ ಜೊತೆ ಕನ್ನಡವನ್ನು ಇಟ್ಟು ಭಾಷೆಯ ಸಂರಚನೆಯ ಬಗ್ಗೆ ತಿಳುವಳಿಕೆಯನ್ನು ಮೂಡಿಸುವುದು.

## ಶಿಕ್ಷಣದ ಯುಕ್ತಿಗಳು

- ದ್ವಿತೀಯ ಭಾಷೆಯ ರೂಪದಲ್ಲಿ ಕಲಿಸಲಾಗುವ ಕನ್ನಡ ಭಾಷೆಯನ್ನು, ಕಲಿಯುವ ಮತ್ತು ಕಲಿಸುವವರ ದೃಷ್ಟಿಯಲ್ಲಿ, ಮಾತೃಭಾಷೆಯನ್ನು ಕಲಿಯುವ ತುಲನೆಯಲ್ಲಿ ಸ್ವಲ್ಪ ಮಂದಗತಿಯಲ್ಲಿ ಸಾಗುತ್ತದೆ. ಈ ಗತಿಯು ಸ್ವಲ್ಪ-ಸ್ವಲ್ಪ ಬೆಳೆಯಲು ಕನ್ನಡ ಅಧ್ಯಾಪಕರು ಸಮಾಲೋಚಿಸಿ ತಮ್ಮ ಬೋಧನಾ ಕಾರ್ಯಗಳನ್ನು ನಿಯೋಜಿಸಿ ಕೊಳ್ಳಬೇಕಾಗುತ್ತದೆ. ಯಾವುದೇ ದ್ವಿತೀಯ ಭಾಷೆಯಲ್ಲಿ ನಿಪುಣತೆಯನ್ನು ಕೊಡುವ-ಗಳಿಸುವ ಉಪಾಯವೆಂದರೆ – ಆ ಭಾಷೆಯನ್ನು ರೋಚಕವಾಗಿ ಅಭ್ಯಾಸ ಮಾಡುವುದು-ಮಾಡಿಸುವುದು. ಆ ಅಭ್ಯಾಸ ಎಷ್ಟು ಅಧಿಕ ರೋಚಕ, ಸಕ್ರಿಯ, ಸಾಂದರ್ಭಿಕವಾಗಿರುತ್ತದೆಯೋ ವಿದ್ಯಾರ್ಥಿಗಳಲ್ಲಿ ಭಾಷೆಯ ಬೆಳವಣಿಗೆ ಸಹ ಅಷ್ಟೆ ವೇಗವಾಗಿ ಆಗುತ್ತದೆ. ಮುಖ್ಯವಾಗಿ ಭಾಷೆಯನ್ನು ಅಭ್ಯಾಸಿಸಲು, ವಾರ್ತಾಲಾಪ, ರೋಚಕವಾದ ಕಥೆಯನ್ನು ಕೇಳುವುದು-ಕೇಳಿಸುವುದು, ಘಟನೆಯ –ವರ್ಣನೆ, ಚಿತ್ರವರ್ಣನೆ, ಸಂವಾದ , ವಾದ-ವಿವಾದ, ಅಭಿನಯ, ಭಾಷಣ ಸ್ಪರ್ಧೆಗಳು, ಕವಿತೆಯ ಕಂಠಪಾಠ ಮತ್ತು ಅಂತ್ಯಾಕ್ಷರಿಯಂತಹ ಚಟುವಟಿಕೆಗಳನ್ನು ಆಧಾರವಾಗಿಟ್ಟು ಕೊಳ್ಳಬಹುದು.
- ಕಾವ್ಯಭಾಷೆಯ ಮರ್ಮವನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸಲು ಕಾವ್ಯಾಂಶದಲ್ಲಿರುವ ಲಯಬದ್ಧ ಪ್ರಸ್ತುತಿಯ ಆಡಿಯೋ-ವಿಡಿಯೋ, ಕ್ಯಾಸಟ್ ತಯಾರು ಮಾಡುವುದು ಅಗತ್ಯವಾಗಿದೆ. ಒಂದು ವೇಳೆ ಸುಲಭವಾಗಿ ಗಾಯಕ/ಗಾಯಕಿ ಸಿಕ್ಕರೆ ತರಗತಿಯಲ್ಲಿ ಮಧ್ಯಕಾಲೀನ ಸಾಹಿತ್ಯ/ಹಳೆಗನ್ನಡ ಸಾಹಿತ್ಯದ ಬೋಧನಾ-ಶಿಕ್ಷಣದಲ್ಲಿ ಅವರ ಸಹಾಯ ತೆಗೆದು ಕೊಳ್ಳಬೇಕು.
- ಎನ್.ಸಿ.ಇ.ಅರ್.ಟಿ (N.C.E.R.T) ಮಾನವ ಸಂಪನ್ಮೂಲ ವಿಕಾಸ ಸಚಿವಾಲಯದ ವಿಭಿನ್ನ ಸಂಘಟನೆ ಮತ್ತು ಸ್ವತಂತ್ರ ನಿರ್ಮಾಣಕಾರರ ಮುಖಾಂತರ ಮಾಡಿರುವ ಕಾರ್ಯಕ್ರಮ/ ಇ – ಸಾಮಾಗ್ರಿ ಮತ್ತು ವೃತ್ತ-ಚಿತ್ರಗಳ ಸಿನಿಮಾವನ್ನು ಶಿಕ್ಷಣ ಸಾಮಾಗ್ರಿಯಂತೆ ಉಪಯೋಗಿಸುವ ಅವಶ್ಯಕತೆ ಇದೆ. ಇದರ ಪ್ರದರ್ಶನ ಸಮಯದಲ್ಲಿ ನಿರಂತರವಾಗಿ ಮಾತುಕತೆಯಾಡುವ ಸಿನಿಮಾ ಮಾಧ್ಯಮದ ಮೂಲಕ ಭಾಷೆಯ ಪ್ರಯೋಗದ ವಿಶಿಷ್ಟತೆಯ ಬಗ್ಗೆ ಅರಿವು ಮೂಡಿಸಬಹುದು ಮತ್ತು ಕನ್ನಡದ ಬಗೆ-ಬಗೆಯ ಆಯಾಮಗಳನ್ನು ತೋರಿಸಬಹುದು.
- ತರಗತಿಯಲ್ಲಿ ಕೇವಲ ಒಂದು ಪಠ್ಯಪುಸ್ತಕದ ಉಪಸ್ಥಿತಿಗಿಂತ ಅಧ್ಯಾಪಕರು ವಿವಿಧ ರೀತಿಯ ಪಠ್ಯಸಾಮಾಗ್ರಿಗಳನ್ನು ಬಳಿಸಿಕೊಂಡು ಬೋಧಿಸಿದರೆ ಅದು ವಿದ್ಯಾರ್ಥಿಗಳಲ್ಲಿ ಹೆಚ್ಚು ಮನವರಿಕೆಯನ್ನು ಉಂಟುಮಾಡುವುದು.
- ಭಾಷೆಯನ್ನು ನಿರಂತರವಾಗಿ ಗ್ರಹಣ ಮಾಡುವ ಕ್ರಿಯೆಯಲ್ಲಿ- ಅದನ್ನು ತೋರಿಸುವ / ಪ್ರದರ್ಶಿಸುವ ರೀತಿಯನ್ನು ಸಹ ಶಿಕ್ಷಕರು ಕಲಿಸಿಕೊಡಬೇಕು. ಅವರು ಸಹ ಶಬ್ಧಕೋಶ, ಸಾಹಿತ್ಯಕೋಶ, ಸಂದರ್ಭ ಗ್ರಂಥಗಳ ಸಹಾಯವನ್ನು ನಿರಂತರವಾಗಿ ಪಡೆಯಬೇಕು. ಇದನ್ನು ನೋಡಿದಾಗ ವಿದ್ಯಾರ್ಥಿಗಳಲ್ಲಿ ಅದನ್ನು ಉಪಯೋಗಿಸುವ ತತ್ಪರತೆ ಹೆಚ್ಚುತ್ತದೆ. ಅನುಮಾನದ ಆಧಾರದ ಮೇಲೆ ಪಡೆಯುವ ಅರ್ಥಕ್ಕಿಂತ ಸರಿಯಾದ ಅರ್ಥವನ್ನು ಪಡೆಯುವುದರಲ್ಲಿ ಕಾರ್ಯನಿರತರಾಗುತ್ತಾರೆ. ಇದರಿಂದ ಪದದ ಬೇರೆ ಬೇರೆ ಅರ್ಥಗಳು ಮತ್ತು ಕಡಿಮೆ ಅಂತರದ ಅರ್ಥಗಳನ್ನು ಸಹ ತಿಳಿದುಕೊಳ್ಳುತ್ತಾರೆ.

- ಭಿನ್ನ ಕ್ಷಮತೆಯಿರುವ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಶಿಕ್ಷಣ ಸಾಮಾಗ್ರಿಗಳನ್ನು ಬಳಸಿಕೊಳ್ಳಬೇಕು ಮತ್ತು ಯಾವುದೇ ಪ್ರಕಾರದಲ್ಲಿ ಅವರನ್ನು ಇತರ ವಿದ್ಯಾರ್ಥಿಗಳಿಗಿಂತ ಕಡಿಮೆ ಸಾಮರ್ಥ್ಯ ಹೊಂದಿದ್ದಾರೆಂದು ತಿಳಿದುಕೊಳ್ಳಬಾರದು.
- ತರಗತಿಯ ಬೋಧನೆಯಲ್ಲಿ ಯಾವುದೇ ರೀತಿಯ ಭೇದಗಳಿದ್ದರೂ ( ಲಿಂಗ,ಧರ್ಮ,ಜಾತಿ,ವರ್ಗ ಇತ್ಯಾದಿ) ಅವುಗಳ ಕಡೆಗೆ ಸಕಾರಾತ್ಮಕ ಸಂವೇದನಾಶೀಲತೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು.

**ವ್ಯಾಕರಣಾಂಶ**

**9ನೇ ತರಗತಿ**

- ವರ್ಣ, ವಿಚ್ಛೇದ, ಅನುಸ್ವಾರ, ಅನುನಾಸಿಕ, ಲಿಂಗಗಳು.
- ಪಠ್ಯದಲ್ಲಿ ಬರುವ ಉಪಸರ್ಗ, ಸಂಧಿ ಮತ್ತು ಪ್ರತ್ಯಯ.
- ವಾಕ್ಯಗಳಲ್ಲಿ ಚಿಹ್ನೆಗಳ ಸರಿಯಾದ ಬಳಕೆ.

**10ನೇ ತರಗತಿ**

- ಶಬ್ಧ ಮತ್ತು ಪದಗಳ ನಡುವಿನ ಅಂತರ
- ರಚನೆಯ ಆಧಾರದ ಮೇಲೆ ವಾಕ್ಯಗಳ ರೂಪಾಂತರ
- ಶಬ್ಧಗಳ ಅವಲೋಕನ, ಕ್ಲಿಷ್ಟ ಶಬ್ಧವನ್ನು ಗುರುತಿಸುವಿಕೆ ಮತ್ತು ಅನೇಕ ಅರ್ಥಗಳ ಅನುಮಾನ.
- ಗಾದೆಗಳು ಮತ್ತು ಅವುಗಳ ಪ್ರಯೋಗ
- ಶುದ್ಧ ವಾಕ್ಯ ರಚನೆ

**ಶ್ರವಣ (ಕೇಳುವ) ಮತ್ತು ವಾಚನ (ಓದುವ / ಮಾತನಾಡುವ ) ಸಾಮರ್ಥ್ಯ**

- ವಾರ್ತೆಗಳು ಅಥವಾ ಸಂವಾದಗಳನ್ನು ಅರ್ಥೈಸುವುದು.
- ಕನ್ನಡ ಭಾಷೆಯ ಸ್ಪಷ್ಟವಾದ ಉಚ್ಚಾರಣೆಯನ್ನು ಮಾಡುವುದು ಮತ್ತು ಸ್ವಾಭಾವಿಕ ಪದಗಳನ್ನು ಬಳಸುವುದು.
- ಸಾಮಾನ್ಯ ವಿಷಯಗಳ ಬಗ್ಗೆ ಮಾತನಾಡುವುದು ಮತ್ತು ಚರ್ಚೆಯಲ್ಲಿ ಭಾಗವಹಿಸುವುದು.
- ಕನ್ನಡ ಕವಿತೆಗಳನ್ನು ಸರಿಯಾದ ಲಯ, ಆರೋಹ-ಅವರೋಹ ಮತ್ತು ಭಾವನಾ ರೂಪದಲ್ಲಿ ಓದುವುದು.
- ಸರಳ ವಿಷಯದ ಬಗ್ಗೆ ಸ್ವಲ್ಪ ತಯಾರಾಗಿ 2-4 ನಿಮಿಷಗಳ ಕಾಲ ಭಾಷಣ ಮಾಡುವುದು.
- ಕನ್ನಡದಲ್ಲಿ ಸ್ವಾಗತಿಸುವುದು, ಪರಿಚಯ ಮತ್ತು ಧನ್ಯವಾದ ಹೇಳುವುದು. ಅಭಿನಯದಲ್ಲಿ ಭಾಗವಹಿಸುವುದು.

**ಶ್ರವಣ(ಕೇಳುವುದು)–2.5 ಅಂಕಗಳು, ವಾಚನ (ಓದುವುದು– ಮಾತನಾಡುವುದು) 2.5 ಅಂಕಗಳ ಪರೀಕ್ಷೆ. ಒಟ್ಟು 5 ಅಂಕಗಳು**

- ಪರೀಕ್ಷಕ ಯಾವುದೇ ಪ್ರಾಸಂಗಿಕ ವಿಷಯದ ಮೇಲಿನ ಲೇಖನವನ್ನು ಸ್ಪಷ್ಟವಾಗಿ ಓದುವುದು. ಲೇಖನ ವಾಸ್ತವಿಕ ಅಥವಾ ಸೂಚ್ಯಾತ್ಮಕವಾಗಿರಬಹುದು. ಲೇಖನವು 100–150 ಶಬ್ಧಗಳಲ್ಲಿರಬೇಕು.

  ಅಥವಾ

  ಪರೀಕ್ಷಕ 1–1½ ನಿಮಿಷಗಳ ಶ್ರವ್ಯಾಂಶವನ್ನು (ಆಡಿಯೋ ಕ್ಲಿಪ್) ಕೇಳಿಸುತ್ತಾನೆ. ಅದು ರೋಚಕವಾಗಿರಬೇಕು. ಕಥೆ/ಘಟನಾ ಪೂರ್ವಗಳು ಸ್ಪಷ್ಟವಾಗಿರಬೇಕು. ವಾಚಕರ ಉಚ್ಚಾರಣೆ ಸ್ಪಷ್ಟ, ಶುದ್ಧ ಮತ್ತು ವಿರಾಮ ಚಿಹ್ನೆಗಳ ಬಳಕೆ ಸರಿಯಾದ ರೀತಿಯಲ್ಲಿರಬೇಕು.

- ಪರೀಕ್ಷಾರ್ಥಿ ಆಡಿಯೋ/ ಧ್ವನಿಯನ್ನು ಕೇಳಿದ ನಂತರ ಪರೀಕ್ಷಕರು ಕೇಳಿದ ಪ್ರಶ್ನೆಗೆ ಪರೀಕ್ಷಾರ್ಥಿ ಮೌಖಿಕವಾಗಿ ಉತ್ತರ ನೀಡಬೇಕಾಗುತ್ತದೆ.

**ಕೌಶಲ್ಯದ ಹಂಚಿಕೆ ಮತ್ತು ಮೂಲ್ಯಾಂಕ**

| ಶ್ರವಣ ( ಕೇಳುವುದು) | ವಾಚನ( ಓದುವುದು/ಹೇಳುವುದು) |
|---|---|
| 1. ವಿದ್ಯಾರ್ಥಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಬಳಸುವ ಮತ್ತು ಅರ್ಥೈಸಿಕೊಳ್ಳುವ ಸಾಮಾನ್ಯ ಸಾಮರ್ಥ್ಯವಿದೆ. | 1. ವಿದ್ಯಾರ್ಥಿ ಕೇವಲ ಬೇರೆ–ಬೇರೆ ಶಬ್ಧಗಳನ್ನು ಪ್ರಯೋಗಿಸುವ ಸಾಮರ್ಥ್ಯವನ್ನು ತೋರಿಸುವನು. |
| 2. ಸಣ್ಣ ಸುಸಂಬದ್ಧ ಹೇಳಿಕೆಗಳನ್ನು ಪರಿಚಿತ ಸಂದರ್ಭಗಳಲ್ಲಿ ಅರ್ಥೈಸಿ ಕೊಳ್ಳುವ ಸಾಮರ್ಥ್ಯವಿದೆ. | **2.** ಪರಿಚಿತ ಸಂದರ್ಭಗಳಲ್ಲಿ ಕೇವಲ ಸಣ್ಣ ಸುಸಂಬದ್ಧ ಹೇಳಿಕೆಗಳನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸುತ್ತಾನೆ. |
| **3.** ಪರಿಚಿತ ಅಥವಾ ಅಪರಿಚಿತ ಸಂದರ್ಭದಲ್ಲಿ ಹೇಳಿಕೆಯ ಸೂಚನೆಗಳನ್ನು ಸ್ಪಷ್ಟವಾಗಿ ಅರಿಯುವ ಸಾಮರ್ಥ್ಯವಿದೆ. | **3.** ಉಪೇಕ್ಷಿತ ದೀರ್ಘ ಭಾಷಣಗಳಲ್ಲಿ ಜಟಿಲವಾದ ಹೇಳಿಕೆಗಳನ್ನು ಪ್ರಯೋಗಿಸುತ್ತಾನೆ. |
| **4.** ದೀರ್ಘ, ಕ್ಲಿಷ್ಟ ಹೇಳಿಕೆಗಳನ್ನು ಸ್ಪಷ್ಟವಾಗಿ ಶುದ್ಧವಾದ ರೀತಿಯಲ್ಲಿ ಅರಿಯುವನು ಮತ್ತು ಹೇಳಿಕೆಯಲ್ಲಿನ ವಾಕ್ಯಗಳ ಶುದ್ಧತೆಯನ್ನು ಹೊರ ತೆಗೆಯುವಲ್ಲಿ ಶಕ್ತನಾಗಿದ್ದಾನೆ. | **4.** ಅಪರಿಚಿತ ಸನ್ನಿವೇಶದಲ್ಲಿ ವಿಷಯಗಳನ್ನು ತಾರ್ಕಿಕವಾದ ರೂಪದಲ್ಲಿ ಸಂಘಟಿಸಿ, ಸುರಿಮಳೆ ರೂಪದಲ್ಲಿ ಪ್ರಸ್ತುತ ಪಡಿಸುವನು. |
| **5.** ಜಟಿಲ ಹೇಳಿಕೆಗಳ ಅಂಶಗಳನ್ನು ಅರಿಯುವ ಸಾಮರ್ಥ್ಯವನ್ನು ಪ್ರದರ್ಶಿಸುವನು. | **5.** ಉದ್ದೇಶ ಮತ್ತು ಭಾಷಣಗಳಲ್ಲಿ ಉಪಯುಕ್ತ ಶೈಲಿಯಿಂದ ಬಳಸಿಕೊಳ್ಳುವನು. |

**ಪಠಣ ಕೌಶಲ್ಯ (ಓದುವ ಸಾಮರ್ಥ್ಯ)**

- ಕನ್ನಡದಲ್ಲಿ ಕಥೆ, ಲೇಖನ, ಪ್ರಬಂಧ, ಪ್ರವಾಸ ವರ್ಣನೆ, ಜೀವನ, ಪತ್ರ ಮುಂತಾದವುಗಳನ್ನು ಅರ್ಥಗರ್ಭಿತವಾಗಿ ಓದುವುದು.
- ಪಠ್ಯವಸ್ತುವಿನ ವಿಚಾರದಲ್ಲಿ ಸಮಾಲೋಚಿಸಿ, ತನ್ನ ಭಾವನೆಗಳನ್ನು ಪ್ರಕಟಿಸುವುದು.
- ಸಂದರ್ಭ ಸಾಹಿತ್ಯವನ್ನು ಓದಿ, ಅದನ್ನು ಅರ್ಥೈಸಿಕೊಳ್ಳುವುದು. ಸೂಚನೆಗಳನ್ನು, ಪಾಲನೆಗಳನ್ನು ಪಾಲಿಸುವುದು.
- ಬೋಧಿಸುವ ಸಾಮಗ್ರಿಗಳ ಭಿನ್ನ ಅಂಶಗಳ ಪರಸ್ಪರ ಸಂಬಂಧದ ಬಗ್ಗೆ ತಿಳಿದುಕೊಳ್ಳುವುದು.
- ಬೋಧಿಸಿದ ಪಠ್ಯದ ಸಾರಾಂಶವನ್ನು ತಯಾರು ಮಾಡುವುದು.
- ಭಾಷೆ, ವಿಚಾರ ಮತ್ತು ಶೈಲಿಯ ಮೌಲ್ಯವನ್ನು ತಿಳಿದುಕೊಳ್ಳುವುದು.
- ಸಾಹಿತ್ಯದ ಕಡೆಗೆ ತನ್ನ ಅಭಿವ್ಯಕ್ತಿಯನ್ನು ಪ್ರಕಟಿಸುವುದು.

**ಬರೆಯುವ ಸಾಮರ್ಥ್ಯ/ಕೌಶಲ್ಯ**

- ಬರೆಯುವಾಗ ವ್ಯಾಕರಣ ಸಹಿತ ಭಾಷೆಯ ಪ್ರಯೋಗ
- ಕನ್ನಡದ ಪರಿಚಿತ ಮತ್ತು ಅಪರಿಚಿತ ಶಬ್ಧಗಳನ್ನು ಸರಿಯಾದ ರೀತಿಯಲ್ಲಿ ಬಳಸುವುದು.
- ವಿರಾಮ ಚಿಹ್ನೆಗಳನ್ನು ಸಮಯೋಚಿತವಾಗಿ ಬಳಸುವುದು.
- ಬರೆಯಲು ಸಕ್ರಿಯವಾದ (ವ್ಯಾವಹಾರಿಕ) ಶಬ್ಧ ಭಂಡಾರವನ್ನು ವೃದ್ಧಿಸುವುದು.
- ಪ್ರಭಾವಪೂರ್ಣ ಭಾಷೆ ಮತ್ತು ಲೇಖನಾಶೈಲಿಯನ್ನು ಸ್ವಾಭಾವಿಕ ರೂಪದಲ್ಲಿ ಪ್ರಯೋಗಿಸುವುದು.
- ಉಪಯುಕ್ತ ಲೇಖನಗಳನ್ನು ವಿಭಜಿಸಿ ಬರೆಯುವುದು.
- ಕೋರಿಕೆಯ ಪತ್ರ, ಆಮಂತ್ರಣಾ ಪತ್ರ, ಶುಭಾಶಯ ಪತ್ರ, ಆದೇಶ ಪತ್ರ, ಇ–ಮೇಲ್, ಸಂದೇಶ, ವರದಿ ಮುಂತಾದವುಗಳನ್ನು ಬರೆಯುವುದು ವಿವಿಧ ಅರ್ಜಿಗಳನ್ನು ತುಂಬುವುದು.
- ವಿವಿಧ ಮೂಲಗಳಿಂದ ಅವಶ್ಯಕ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಅಭೀಷ್ಟ ವಿಷಯದ ಮೇಲೆ ಲೇಖನವನ್ನು ಬರೆಯುವುದು.
- ನೋಡಿದ ಘಟನೆಗಳನ್ನು ವರ್ಣನೆ ಮಾಡುವುದು ಮತ್ತು ಅವುಗಳ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ಪ್ರಕಟಿಸುವುದು.
- ಓದಿದ ಕಥೆಯನ್ನು ಸಂವಾದಿಸುವುದು ಮತ್ತು ಸಂವಾದಿಸಿದ ಕಥೆಯನ್ನು ಪರಿವರ್ತನೆ ಮಾಡುವುದು.
- ಸಮಾರೋಹ ಮತ್ತು ಗೋಷ್ಠಿಗಳ ಸ್ವಾಗತ ಭಾಷಣ ವಂದನಾರ್ಪಣೆಯನ್ನು ತಯಾರು ಮಾಡುವುದು.
- ಬರವಣಿಗೆಯಲ್ಲಿ ಮೌಲ್ಯ ಮತ್ತು ಸೃಜನಶೀಲತೆಯನ್ನು ತರುವುದು.

**ರಚನಾತ್ಮಕ ಅಭಿವ್ಯಕ್ತಿ**

- ಪೂರ್ಣತೆ –ಲೇಖನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಸಂಯೋಜಿಸುವುದು.
- ಕ್ರಮಬದ್ಧತೆ – ವಿಚಾರಗಳನ್ನು ತಾರ್ಕಿಕವಾಗಿ ಮತ್ತು ಕ್ರಮಬದ್ಧವಾಗಿ ಪ್ರಕಟಿಸುವುದು
- ವಿಷಯ ಕೇಂದ್ರಿತ– ಲೇಖನದ ಪ್ರಾರಂಭ ಮತ್ತು ಅಂತ್ಯವನ್ನು ಲೇಖನದ ವಿಷಯಕ್ಕೆ ಸಂಬಂಧಿಸಿದಂತೆ ಬರೆಯುವುದು.
- ಹೊಂದಾಣಿಕೆ– ಸೀಮಿತ ಶಬ್ದಗಳಲ್ಲಿ ವಿಷಯವನ್ನು ಪೂರ್ಣವಾಗಿ ಹೇಳಲು ಪ್ರಯತ್ನಿಸಿ, ಅನಾವಶ್ಯಕ ಅಂಶಗಳನ್ನು ಬರೆಯದಿರುವ ವಿವೇಚನೆ.

**ಜಾಹೀರಾತು ಲೇಖನ**
**ಜಾಹೀರಾತುವಿನ ವಿಷಯ /ವಸ್ತುವನ್ನು ಕೇಂದರವಾಗಿರಿಸಿಕೊಂಡು**

- ಜಾಹೀರಾತು ವಸ್ತುವಿನ ವಿಶಿಷ್ಟ ಗುಣಗಳ ಉಲ್ಲೇಖ
- ಆಕರ್ಷಕ ಲೇಖನ ಶೈಲಿ
- ಪ್ರಸ್ತುತಿಯಲ್ಲಿ ಹೊಸತನ, ವರ್ತಮಾನಕ್ಕೆ ಸಂಬಂಧಿಸಿದ ಮತ್ತು ಇತರರಿಗಿಂತ ಭಿನ್ನವಾದ ಅಂಶಗಳು.
- ಜಾಹೀರಾತಿನಲ್ಲಿ ಅಗತ್ಯಕ್ಕೆ ತಕ್ಕಂತೆ ಘೋಷಣೆಯ ಬಳಕೆ.
- (ಜಾಹೀರಾತು ಲೇಖನದಲ್ಲಿ ಪೆಟ್ಟಿಗೆ, ಚಿತ್ರ, ಅಥವಾ ಬಣ್ಣದ ಉಪಯೋಗ ಅನಿವಾರ್ಯವಲ್ಲ.)

**ಸಂವಾದ ಲೇಖನ**

ಇಬ್ಬರು ಅಥವಾ ಅಧಿಕ ವ್ಯಕ್ತಿಗಳ ನಡುವೆ ನಡೆಯುವ ವಾರ್ತಾಲಾಪ, ಮಾತುಕತೆಯ ವಿಷಯ, ಕಾಲ್ಪನಿಕ ಅಥವಾ ಯಾವುದೇ ವಿಚಾರಗಳನ್ನು ಕೇಳಿ, ಅದರ ಆಧಾರದ ಮೇಲೆ ಸಂವಾದ ಲೇಖನದ ರಚನಾತ್ಮಕ ಶಕ್ತಿಯ ವಿಕಾಸಕ್ಕೆ ಕಥೆ, ನಾಟಕ, ಸಿನಿಮಾ ಮತ್ತು ಧಾರವಾಹಿಯ ಸಹಾಯ ಪಡೆದುಕೊಳ್ಳುವುದು.

- ಪತ್ರಗಳ ಅನುಕೂಲತೆಯ ಭಾಷಾ ಶೈಲಿ ಶಬ್ದ ರಚನೆಯ ನಿರ್ಬಂಧಕ್ಕೆ ತಕ್ಕಂತೆ ಒಂದು ಮತ್ತೊಂದಕ್ಕೆ ಹೊಂದಿಕೆಯಾಗುವಂಥ ಉದ್ದೇಶಪೂರ್ಣ ಮತ್ತು ಸಾರ್ಥಕ ಸಂವಾದ.
- ಸಂಭಾಷಣಾಕಾರರ ಹಾವ–ಭಾವದ ಸಂಕೇತ
- ಸಂವಾದದ ಕೊನೆಯಲ್ಲಿ ವಿಷಯಕ್ಕೆ ಸಂಬಂಧಿಸಿದ ಮುಕ್ತಾಯ.

**ಸೂಚನಾ ಲೇಖನ/ಬರವಣಿಗೆ**

ಯಾವುದೇ ವಿಶೇಷ ಸೂಚನೆಯನ್ನು ಸಾರ್ವಜನಿಕವಾಗಿ ತಿಳಿಸುವುದು, ಕಡಿಮೆ ಶಬ್ದಗಳಲ್ಲಿ ಔಪಚಾರಿಕ ಶೈಲಿಯಲ್ಲಿ ಬರೆದ ಸಂಕ್ಷಿಪ್ತ ಸೂಚನೆ.

- ಉದ್ದೇಶದ ಸ್ಪಷ್ಟತೆ
- ಸರಳ ಭಾಷೆಯ ಪ್ರಯೋಗ
- ಸ್ಪಷ್ಟ ಶೀರ್ಷಿಕೆ, ಮುಖ್ಯ ವಿಷಯ ವಸ್ತು, ವಿಷಯಗಳ ಸರಿಯಾದ ಹೊಂದಾಣಿಕೆ.

**ಪತ್ರ ಲೇಖನ**

- ಅನೌಪಚಾರಿಕ ಪತ್ರ, ವಿಚಾರ – ವಿಮರ್ಶೆಯ ಮೂಲಕ, ಸರಳತೆ, ಸಂಕ್ಷಿಪ್ತತೆಯ ರೂಪದಲ್ಲಿ ಸರಿಯಾದ ವಿಚಾರವನ್ನು ಬರೆಯುವ ಶೈಲಿ.
- ಔಪಚಾರಿಕ ಪತ್ರದ ಮೂಲಕ ದೈನಂದಿನ ಜೀವನದ ವಿಭಿನ್ನ ಪರಿಸ್ಥಿತಿಯಲ್ಲಿ ಕೆಲಸ, ವ್ಯಾಪಾರ, ಸಂವಾದ, ಪರಾಮರ್ಶೆ ಮತ್ತು ಸೂಚನೆಗಳನ್ನು ಸ್ಪಷ್ಟ ರೀತಿಯಲ್ಲಿ ಬರೆಯುವ ಕ್ಷಮತೆ.
- ಸರಳ, ಸಂಕ್ಷಿಪ್ತ ಭಾಷಾ ಶೈಲಿ ಉಪಯುಕ್ತ ರೀತಿಯಲ್ಲಿ ಪದಗಳ ಪ್ರಯೋಗ ಸ್ಪಷ್ಟ ರೀತಿಯಲ್ಲಿ ಪ್ರತ್ಯಕ್ಷ ವಿಷಯದ ಪ್ರಸ್ತಾಪ.
- ಪ್ರಾಥಮಿಕ / ಪೂರ್ವ ಅವಶ್ಯಕತೆಗಳಿಗನುಗುಣವಾಗಿ ಔಪಚಾರಿಕತೆಯ ಜೊತೆಯಲ್ಲಿ ಸ್ಪಷ್ಟ ಸುಲಭ ಕ್ರಮಬದ್ಧವಾದ ವಿಚಾರ.
- ಅವಶ್ಯಕ ಸಂಕ್ಷಿಪ್ತ ಮತ್ತು ಪೂರ್ಣತೆಯ ಜೊತೆ ಪ್ರಭಾವ ನೀತಿ.

# KANNADA LANGUAGE (CODE : 015)

# Class – X (2020-21)

**Time : 3 Hrs.** **Total : 80 Marks**

The Question Paper will be divided into four sections :

| | | | |
|---|---|---|---|
| Section A | Reading Comprehension | 12 Marks | 30 Pds |
| Section B | Writing | 15 Marks | 40 Pds |
| Section C | Grammar | 18 Marks | 42 Pds |
| Section D | Literature | 35 Marks | 80 Pds |

## Design of Question Paper

| Sl. No. | Type of Questions | No. of Questions | No. of Marks Per Question | Total No. of Marks |
|---|---|---|---|---|
| 1 | VSA | 14 | 1/2 | 07 |
| 2 | MCQ | 10 | 01 | 10 |
| 3 | SAQ | 18 | 01 | 18 |
| 4 | SAQ | 05 | 02 | 10 |
| 5 | SAQ | 04 | 03 | 12 |
| 6 | LAQ | 03 | 04 | 12 |
| 7 | LAQ | 01 | 05 | 05 |
| 8 | LAQ | 01 | 06 | 06 |
| | | 56 | | **80** |

## Kannada Language (CODE:015) (2020-21) Class. X

## SECTIONWISE DESIGN OF QUESTION PAPER

| Section | Type of Question | No. of Questions | No. of Marks per Question | Total Marks | Grand Total Marks |
|---|---|---|---|---|---|
| **A (Reading Comprehension)** | | | | | |
| (Unseen Passage, Prose) | SAQ | **2** | **1** | **2** | **12** |
| | SAQ | **2** | **2** | **4** | |
| (Unseen Poem) | SAQ | **2** | **1** | **2** | |
| | SAQ | **2** | **2** | **4** | |
| **B (Writing Comprehension)** | | | | | |
| Essay | LAQ | **1** | **6** | **6** | **15** |
| Official Letter/Job application | LAQ | **1** | **5** | **5** | |
| Report Writing | LAQ | **1** | **4** | **4** | |
| **C (Grammar)** | VSA | **14** | **½** | **7** | **18** |
| | SA | **9** | **1** | **9** | |
| | SA | **1** | **2** | **2** | |
| **D (Literature)** | | | | | |
| Prose | MCQ | **5** | **1** | **5** | **35** |
| Poetry | MCQ | **5** | **1** | **5** | |
| Prose : (Question) | SAQ | **1** | **3** | **3** | |
| (Reference to Context) | SAQ | **1** | **3** | **3** | |
| Poetry : (Question) | SAQ | **1** | **3** | **3** | |
| (Reference to Context) | SAQ | **1** | **3** | **3** | |
| Prose | LAQ | **1** | **4** | **4** | |
| Poetry | LAQ | **1** | **4** | **4** | |
| **Nondetail** (Pathya Poshaka adhyayana) | SA | **5** | **1** | **5** | |
| | **Total** | **56** | | | **80** |

## Kannada Language (CODE:015) (2020-21) Class. X
## OVERALL DETAILED DESIGN OF THE QUESTION PAPER

| Type of Question | No. of Questions | No. of Marks Per Question | Total Marks |
|---|---|---|---|
| VSAQ | 14 (Grammar) | ½ | 7 |
| SAQ | 18 - 9(grammar)<br>4(comprehension)<br>5 (non-detail) | 1 | 18 |
| MCQ | 10- 5(prose)<br>5(poetry) | 1 | 10 |
| SAQ | 5 - 4(comprehension)<br>1(proverb) | 2 | 10 |
| SAQ | 4 - 2 questions<br>- ( 1 prose, 1poetry)<br>- 2 ref. to context<br>- (1 prose, 1poetry) | 3 | 12 |
| LAQ | 3 - 1 (report writing)<br>-1 (prose)<br>-1 (poetry) | 4 | 12 |
| LAQ | 1 (Off. Letter/ Job. App)<br>1 (Essay) | 5<br>6 | 5<br>6 |
| | 56 | | 80 |

**SYLLABUS FOR KANNADA CODE : 015**
**CLASS X (2020-21)**

**TOPICS** **TOTAL 80 MARKS**

-----------------------------------------------------------------------

**A) Reading Section :** 2 Unseen passages from prose and poetry**. 6+6=12**

**B) Writing Section :** **6+5+4=15**

**1.** One Essay (descriptive, narrative, factual etc.)(About 150 words)

**2.** One official letter, (BusinessLetter, Application for Jobs, Leave Applications, Letter to the Editor etc.)

**3.** Report writing (Making notes for important events given & writing reports for newspapers, magazines etc.)

C) **Grammar Section :** **18**

The Grammar syllabus will lnclude the following areas :

1) Different meaning
2) Samaasa
3) Sandhi
4) Tatsama-Tadbhava
5) Making sentences
6) Synonyms and Antonyms
7) Jodi Pada
8) Dvirukti-Anukarana vaachaka
9) Vibhakti Pratyaya
10) Analogy
11) Proverbs
12) Tense (Present/Past/Future)
13) Pronoun
14) Vaakya parivartane : Vidyarthaka, Nishedhaarthaka, bhaavanaarthaka, Aascharysuchaka, Prashnaarthaka vaakyagalu
15) Dhatu
16) Kaalapallata
17) Kartari-Karmani Prayoga
18) Graamya-Graanthika Roopa
19) Arthavyatyaasa

**D. Literature Section :** Text :-

**Part 1**

**Prose:-** **15**

1) Yuddha
2) Shabari
3) Bhagyashilpigalu (Naalvadi Krishnaraja Odeyru, Sir M. Vishweshwarayya )
4) Edege bidda akshara
5) Vyaaghra Geete
6) Vruksha Saakshi

**Poetry:-** **15**

1) Sankalpa Geete
2) Hakki haarutide nodidiraa
3) Halagali bedaru
4) Kouravendrana konde neenu
5) Hasuru
6) Veera lava

**Part 2**

**Pathya Puraka Adhyayana :(Non-detailed portion in the same text book)** **5**

1. Swami Vivekanandara Chintanegalu
2. Vasantha Mukha oralilla
3. Bhagath Singh
4. Mruga mattu Sundari
5. Ogatugalu.

**Prescribed text book : Siri Kannada-10 (Parishkrutha)**

Karnataka Pathya Pustaka Sangha (Reg),

# (R No. 4, 100 Feet Raste (Ring Road)

Banashankari-3rd Phase, Bengaluru – 560085